O.S.No.:348/2017

P.W.:2

ಈ ದಿನ ದಿಃ 06-01-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ವಕೀಲರಿಂದಃ

ನಾನು ಬಿ.ಕಾಂ. ಎಲ್.ಎಲ್.ಬಿ. ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ನನ್ನ ಶಿಕ್ಷಣವನ್ನು ಬೆಳಗಾವಿಯಲ್ಲಿ ಮುಗಿಸಿರುತ್ತೇನೆ. ನಾನು ವಕೀಲ ವೃತ್ತಿ ಮಾಡುತ್ತೇನೆಂದರೆ ಸಾಕ್ಷಿಯು ವಕೀಲ ವೃತ್ತಿ ಹಾಗೂ ಒಕ್ಕಲುತನ ಮಾಡುತ್ತೇನೆಂದು ಉತ್ತರಿಸುತ್ತಾರೆ. ನಾನು ಮೊದಲಿನಿಂದಲೂ ಬೆಳಗಾವಿಯಲ್ಲಿ ವಾಸವಾಗಿದ್ದೇನೆಂದರೆ ಸರಿ. ದಾವೆ ತಯಾರಿಸಲು ನಮ್ಮ ತಂದೆ ಮಾಹಿತಿ ಕೊಟ್ಟಿರುತ್ತಾರೆ . ದಾವಾ ದಾಖಲು ಮಾಡುವ ಸಮಯದಲ್ಲಿ ನಾನು ಬೆಳಗಾವಿಯಲ್ಲಿ ಇದ್ದೆ ಎಂದರೆ ಸರಿ ಅಲ್ಲ . ನನ್ನ ಮನೆತನ ಸರ್ಕಾರ ಮನೆತನ ಎಂದರೆ ಸರಿ. ನಮ್ಮ ಮನೆತನಕ್ಕೆ ರಾಜ್ಯಾದ್ಯಂತ ಮೊದಲಿಗೆ ಆಸ್ತಿಗಳು ಇದ್ದವು ಎಂದರೆ ಸಾಕ್ಷಿಯು ಮುಂದುವರೆದು ಈಗ ಇಲ್ಲ ಎಂದು ಉತ್ತರಿಸುತ್ತಾರೆ. ನಮ್ಮ ಮನೆತನಕ್ಕೆ ನಾಗರಮುನ್ನೋಳಿ ಹಾಗೂ ಕಬ್ಬೂರ ಸುತ್ತ ಮುತ್ತ ಆಸ್ತಿಗಳು ಇವೆ.

ನಮ್ಮ ಮನೆತನದ ಮೂಲ ಪುರುಷ ಸಿದ್ದೋಜಿರಾವ. ನಮ್ಮ ಮನೆತನಕ್ಕೆ ಇರುವ ನಾಗರಮುನ್ನೋಳಿ ಹಾಗೂ ಕಬ್ಬೂರಿನ ಆಸ್ತಿಗಳ ನಂಬರಗಳನ್ನು ಹೇಳಲು ಬರುತ್ತದೆ . ನಮ್ಮ ಆಸ್ತಿಯ ಮೂಲ ಮಾಲೀಕರು ವಂಟಮೂರಿ ಸರ್ಕಾರ ಎಂದರೆ ನನಗೆ ಮಾಹಿತಿ ಇಲ್ಲ. ಅದರ ಮೂಲ ವಾರಸುದಾರರು ರಾಜಾಲಕ್ಕಂಗೌಡ ಸರ್ ದೇಸಾಯಿ ಎಂದರೆ ನನಗೆ ಮಾಹಿತಿ ಇಲ್ಲ. ರಾಜಾಲಕ್ಕಂಗೌಡ ಸರ್ ದೇಸಾಯಿ ಮೃತ ಪಟ್ಟ ನಂತರ ಸಿದ್ದೋಜಿರಾವ ವಾರಸಾ ಪ್ರಕಾರ ಬಂದರು ಎಂದರೆ ನನಗೆ ಮಾಹಿತಿ ಇಲ್ಲ . ಸಿದ್ದೋಜಿರಾವರವರು ಒಟ್ಟು 7 ಆಸ್ತಿಗಳನ್ನು ಪಾಳೆಗೆ ಕೊಟ್ಟಿರುತ್ತಾರೆಂದರೆ ಸರಿ ಅಲ್ಲ . ಅದೇ ಪ್ರಕಾರ ಸಿದ್ದೋಜಿರಾವ ದಿಃ 16-01-1942 ರಲ್ಲಿ ಮೃತ ಪಟ್ಟಿರುತ್ತಾರೆಂದರೆ ನನಗೆ ಮಾಹಿತಿ ಇಲ್ಲ . ಅವರ ಮೃತ ನಂತರ ಸದಾಶಿವರಾವ ರವರು ಸಿದ್ದೋಜಿರಾವ ರವರ ಆಸ್ತಿಗೆ ವಾರಸುದಾರರು ಅಂತಾ ಹೆಸರು ದಾಖಲೆಗಳಲ್ಲಿ ದಾಖಲಾಗಿರುತ್ತದೆ ಎಂದರೆ ಸರಿ . ಸದಾಶಿವರವರು ದಿಃ 14-04-1971 ರಲ್ಲಿ ಮೃತರಾದರು ಎಂದರೆ ಸರಿ. ನಮ್ಮ ತಂದೆ ಸುಬ್ಬನರಾವ ರವರು ಸದಾಶಿವ ರವರ ದತ್ತಕ ಪುತ್ರ ಎಂದರೆ ಸರಿ. ಡೈರಿ ನಂಃ 2077 ರ ಪ್ರಕಾರ ನಮ್ಮ ತಂದೆ ಹಾಗೂ ತಾಯಿ ದತ್ತಕದ ಪ್ರಕಾರ ಆಸ್ತಿಗಳಿಗೆ ಹೆಸರು ನಮೂದು ಆಗಿದೆ ಎಂದರೆ ಸರಿ. ನಾಗರಮುನ್ನೋಳಿ ಗ್ರಾಮ ಪಂಚಾಯತಿ 1993-94 ರಲ್ಲಿ ಆಗಿರಬಹುದು. ನಾಗರಮುನ್ನೋಳಿ ಗ್ರಾಮ ಪಂಚಾಯತಿ 1965 ರಲ್ಲಿ ಪ್ರಾರಂಭವಾಗಿದೆ ಎಂದರೆ ಸರಿ ಅಲ್ಲ. ದಾವಾ ಆಸ್ತಿಯಲ್ಲಿ ಸಿದ್ದೋಜಿರಾವ ರವರ ಪೂರ್ವಜರ ಕಾಲದಿಂದಲೂ ಪ್ರತಿವಾದಿಯರ ಪೂರ್ವಜರು ಸುಮಾರು 100 ವರ್ಷಗಳ ಕಾಲದಿಂದ ಕಬ್ಜಾ ಇದ್ದಾರೆ ಎಂದರೆ ಸರಿ ಅಲ್ಲ. ಪ್ರತಿವಾದಿಯರನ್ನು ಹೊರತುಪಡಿಸಿ ಇನ್ನೂ 6-7 ಕುಟುಂಬದವರು ದಾವಾ ಸರ್ವೆ ನಂಬರ ಆಸ್ತಿಯಲ್ಲಿ ವಾಸವಾಗಿದ್ದಾರೆಂದರೆ ಸರಿ ಅಲ್ಲ . ದಿಃ 14-11-1973 ರಲ್ಲಿ ಆದ ಠರಾವಿನ

ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ಠರಾವಿನಲ್ಲಿ ಸುಮಾರು ಜನರು ಆಸ್ತಿಗಳ ಮಾಲೀಕರು ಅಂತಾ ಅವರ ಹೆಸರು ದಾಖಲ ಮಾಡಲು ಆದೇಶ ಆಗಿದೆ ಎಂದರೆ ಸರಿ ಅಲ್ಲ.

ನಾವು ದಾವಾ ಸರ್ವೆ ನಂಬರಗೆ ಹಾಗೂ ನಾಗರಮುನ್ನೋಳಿಯಲ್ಲಿ ಆಸ್ತಿಗಳಿಗೆ ಸಂಬಂಧಿಸಿದಂತೆ ಸಲ್ಲಿ ಎಲ್ಲ ಪ್ರಕರಣಗಳು ಮಾನ್ಯ ಸರ್ವೋಚ್ಚ ನ್ಯಾಯಾಲಯದವರೆಗೂ ನಮ್ಮ ವಿರುದ್ಧ ಆದೇಶವಾಗಿವೆ ಎಂದರೆ ಸರಿ ಅಲ್ಲ . ನಾನು ದಾವಾ ಆಸ್ತಿಯಲ್ಲಿ ಯಾವತ್ತು ಕಬ್ಜಾದಲ್ಲಿ ಇಲ್ಲ ಎಂದರೆ ಸರಿ ಅಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೇಳಿದ್ದರಿಂದ ಆಲಿಸಿ ಮುಂದೂಡಲಾಯಿತು.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

C/c.2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಕ್ಕೋಡಿ